# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. ಸಂಖ್ಯೆ: 452/2025

ಪ್ರಾಸಾ – 3

ಚಾಸಾ – 9

**ಸಾಕ್ಷಿಯು ದಿಃ 14.11.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಸಿದ್ದರಾಜು |
| ತಂದೆಯ ಹೆಸರು | : | ಕೆಂಪಶೆಟ್ಟಿ |
| ವಯಸ್ಸು | : | 60 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಭೀಮನಬಿಡು |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ನನ್ನ ಮಗ, ಚಾಸಾ 2 ಮತ್ತು 3 ಚಾಸಾ 1 ರವರ ಮಕ್ಕಳು. ಚಾಸಾ 4 ರಿಂದ 7 ಗೊತ್ತು. ಆರೋಪಿಗಳು ಗೊತ್ತು. ಸುಮಾರು 4 ವರ್ಷಗಳ ಹಿಂದೆ ಮದ್ಯಾಹ್ನ 3 ಗಂಟೆ ಸಮಯದಲ್ಲಿ 1 ಮತ್ತು 2ನೇ ಆರೋಪಿಗಳು ನಮ್ಮ ಮನೆಯ ಹತ್ತಿರ ಬಂದು, ಚಾಸಾ 1 ರವರಿಗೆ 2ನೇ ಆರೋಪಿಯು ಕಲ್ಲಿನಿಂದ ತಲೆಗೆ ಹೊಡೆದಿರುತ್ತಾರೆ, ಆಗ ಆತ ಬಾಯಿ ಬಡಿದುಕೊಂಡು ಬಿದ್ದುಹೋಗಿದ್ದು, ಚಾಸಾ 2 ಮತ್ತು 3 ರವರು ಮನೆಯ ಹೊರಗೆ ಓಡಿ ಬಂದಿರುತ್ತಾರೆ, ಆಗ 1 ಮತ್ತು 2ನೇ ಆರೋಪಿಗಳು ಚಾಸಾ 2 ರವರನ್ನು ಹಿಡಿದುಕೊಂಡು ಕೈಯಿಂದ ಹಿಡಿದು ಕಾಲಿನಿಂದ ತುಳಿದಿರುತ್ತಾರೆ, ಚಾಸಾ 3 ರವರಿಗೆ ಕಾಲಿನಿಂದ ತುಳಿದು, ಕಲ್ಲಿನಿಂದ 2ನೇ ಆರೋಪಿ ಹೊಡೆದಿರುತ್ತಾರೆ. ಆಗ ನಾನು ಬರುವಷ್ಟರಲ್ಲಿ 1 ಮತ್ತು 2ನೇ ಆರೋಪಿಗಳು ಹೊರಟು ಹೋಗಿದ್ದರು. ಚಾಸಾ 4 ರಿಂದ 7 ರವರು ಗಲಾಟೆ ಬಿಡಿಸಿರುತ್ತಾರೆ. ಆರೋಪಿಗಳು ಹೋಗುವಾಗ, ಕೊಲೆ ಮಾಡದೇ ಬಿಡುವುದಿಲ್ಲ ಎಂದು ಹೇಳಿ ಹೋಗಿತ್ತಾರೆ, 2ನೇ ಆರೋಪಿಯು ಕಲ್ಲಿನಿಂದ ನಮ್ಮ ಕಾರಿನ

ಗಾಜಿಗೆ ಹೊಡೆದಿದ್ದು ನಮಗೆ 10 ರಿಂದ 12 ಸಾವಿರ ನಷ್ಟ ಉಂಟಾಗಿರುತ್ತದೆ. ನಂತರ ಚಾಸಾ 1 ರಿಂದ 3 ರವರು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ. 1 ಮತ್ತು 2ನೇ ಆರೋಪಿಗಳು ಹೊಡೆದ ನಂತರ 3 ಮತ್ತು 4ನೇ ಆರೋಪಿಗಳು ಬೈದುಕೊಂಡು ಅಲ್ಲಿಗೆ ಬಂದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು 1 ರಿಂದ 3 ಕಲ್ಲಿನಿಂದಲೇ 2ನೇ ಆರೋಪಿ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು :– ಆರೋಪಿಗಳ ಪರ ವಕೀಲರಿಂದ**

ಘಟನೆ ನಡೆದ ದಿನಾಂಕ ಮತ್ತು ಸಮಯ ನಾನು ವಿದ್ಯಾವಂತನಲ್ಲದ ಕಾರಣ ಹೇಳಲಾಗುವುದಿಲ್ಲ, ಆದರೆ 4 ವರ್ಷಗಳು ಆಗಿವೆ. ಘಟನೆ ನಡೆದಿದೆ ಎನ್ನುವ ಸಮಯದಲ್ಲಿ ನಾನು ನಮ್ಮ ಇನ್ನೊಂದು ಮನೆಯ ಒಳಗಡೆ ಇದ್ದೆ. ನೀವು ಯಾವಾಗ ಮನೆಯ ಹೊರಗ ಬಂದಿರಿ ಎಂದರೆ ಸಾಕ್ಷಿಯು ಗಲಟೆ ಶಬ್ದ ಕೇಳಿ ನಂತರ ನಾನು ಮನೆಯ ಹೊರಗಡೆ ಬಂದಿರುತ್ತೇನೆ. ಗಲಾಟೆ ಶಬ್ದ ಕೇಳಿದ 1–2 ನಿಮಿಷಗಳಲ್ಲಿ ನಾನು ಹೊರಗಡೆ ಬಂದಿರುತ್ತೇನೆ. ಆಗ ಅಲ್ಲಿ ಎಷ್ಟು ಜನ ಸಾರ್ವಜನಿಕರು ಸೇರಿದ್ದರು ಎಂದರೆ ಸಾಕ್ಷಿಯು ಸುಮಾರು 5–6 ಜನ ಅಕ್ಕಪಕ್ಕದವರು ಸೇರಿದ್ದರು ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲ, ಕಾರಣ ನಾನು ವಿದ್ಯಾವಂತನಲ್ಲ. ವಿದ್ಯಾವಂತನಲ್ಲದಿದ್ದರೂ ಸಹ ಘಟನಾ ಸ್ಥಳದ ಚೆಕ್ಕುಬಂದಿ ಹೇಳಬಹುದು ಎಂದರೆ ಸರಿಯಲ್ಲ. 2ನೇ ಆರೋಪಿ ಕಲ್ಲಿನಿಂದ ಚಾಸಾ 1 ರವರಿಗೆ ಹೊಡೆದಾಗ ಎಷ್ಟು ಜನ ಇದ್ದರು ಎಂದರೆ ಸಾಕ್ಷಿಯು ನಾನು ಬರುವಷ್ಟರಲ್ಲಿ ಹೊಡೆದಿದ್ದರು, ಅಕ್ಕಪಕ್ಕದ ಜನರು ಸೇರಿದ್ದರು ಎಂದು ನುಡಿಯುತ್ತಾರೆ. ನಾನು ಮನೆಯಿ ಹೊರಗಡೆ ಬಂದ ಸಮಯದಲ್ಲಿ ಆರೋಪಿಗಳು ಸ್ಥಳದಲ್ಲಿ ಇರಲಿಲ್ಲ, ಹೊಡೆದು ಓಡಿಹೋಗಿದ್ದರು.

2. ಮುದ್ದೆ ಮಾಲು 1 ಕಲ್ಲಿನ ಮೇಲೆ ನಿಖರವಾದ ಗುರುತು ಇದೇಯಾ ಎಂದರೆ ಸಾಕ್ಷಿಯು ಆ ಕಲ್ಲಿನಿಂದ ಆರೋಪಿ ಹೊಡೆದಿದ್ದು, ಅದು ಚಾಸಾ 1 ರವರಿಗೆ ಹೊಡೆದು

ನಂತರ ಕಾರಿನ ಒಳಗಡೆ ಬಂದು ಬಿದ್ದಿತ್ತು ಅದನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಘಟನೆಯಲ್ಲಿ ಚಾಸಾ 1 ರವರ ಬಟ್ಟೆಗೆ ರಕ್ತವಾಗಿತ್ತು. ಚಾಸಾ 1 ರವರ ರಕ್ತವಾಗಿದ್ದ ಬಟ್ಟೆಯನ್ನು ಪೊಲೀಸರಿಗೆ ಕೊಟ್ಟರಾ, ಆ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಒಂದು ಚೌಕಕ್ಕೆ ರಕ್ತವಾಗಿತ್ತು ಅದನ್ನು ಪೊಲೀಸರಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ರವರಿಗೆ ಕಲ್ಲಿನಿಂದ ಹೊಡೆದಿಲ್ಲ, ಚಾಸಾ 2 ಮತ್ತು 3 ರವರಿಗೆ ಕೈಯಿಂದ ಮತ್ತು ಕಾಲಿನಿಂದ ಹೊಡೆದು ತುಳಿದಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಮ್ಮ ಕಾರಿನ ಸಂಖ್ಯೆ ನನಗೆ ಗೊತ್ತಿಲ್ಲ.

3. ಚಾಸಾ 1 ರಿಂದ 3 ರವರನ್ನು ನಮ್ಮ ಪಕ್ಕದ ಮನೆಯವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನಾನು ಘಟನೆ ನೋಡದೆ ಇದ್ದರೂ ಸಹ ನನ್ನ ಮಗ ಮತ್ತು ಮೊಮ್ಮಕ್ಕಳಾದ ಚಾಸಾ 1 ರಿಂದ 3 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ